# ರೋಲಿಂಗ್ ಫ್ರೇಮ್ ಫಿಲಂ ಸೊಸೈಟಿಯಿಂದ 3ನೇ ಆವೃತಿಯ ರೋಲಿಂಗ್ ಫ್ರೇಮ್ಸ್ ಇಂಟರ್‌ನ್ಯಾಷನಲ್ ಫಿಲಂ ಸಮ್ಮಿತ್ 2015 ಘೋಷಣೆ

*ಹಿಂದೆಂದಿಗಿಂತ ಅದ್ದೂರಿ ಕಾರ್ಯಕ್ರಮದ ನಿರೀಕ್ಷೆ*

*ಟಿ.ಎಸ್.ನಾಗಾಭರಣ, ಅಂಕುರ್ ಭಾಸಿನ್, ನಿರ್ಮಾಪಕ ಬಿ.ಸುರೇಶ್, ಲೇಯ್ಬನ್ ಎರ್ನೆಬರ್ಗ್, ಕೌಶಲಗಳ ನಿರ್ದೇಶಕ – ಬ್ರಿಟಿಷ್ ಕೌನ್ಸಿಲ್ ಉಪಸ್ಥಿತಿ*

**ಬೆಂಗಳೂರು, ಅ.16,2015:** ರೋಲಿಂಗ್ ಫ್ರೇಮ್ ಫಿಲಂ ಸೊಸೈಟಿಯಿಂದ ತನ್ನ ಇಂಟರ್‌ನ್ಯಾಷನಲ್ ಫಿಲಂ ಸಮ್ಮಿತ್‌ನ 3ನೇ ಆವೃತಿ ರೋಲಿಂಗ್ ಫ್ರೇಮ್ಸ್ ಇಂಟರ್‌ನ್ಯಾಷನಲ್ ಫಿಲಂ ಸಮ್ಮಿತ್ 2015 ಘೋಷಿಸಿದೆ. ಅಂತಾರಾಷ್ಟ್ರೀಯ ಸಿನಿಮಾ ಉತ್ಸವ, ಕಲಾ ಪ್ರದರ್ಶನ, ಸೆಮಿನಾರ್, ಮಾಸ್ಟರ್‌ಕ್ಲಾಸ್, ಪ್ರಶಸ್ತಿ ಪ್ರದಾನ ಸಮಾರಂಭ ಮೊದಲಾದವು ಅ.24 ಮತ್ತು 25, 2015ರಂದು ಬೆಂಗಳೂರಿನ ಮ್ಯಾಫೋ ಸಭಾಂಗಣದಲ್ಲಿ ನಡೆಯಲಿದೆ.

ಈ ಆವೃತಿ ಹಿಂದೆಂದಿಗಿಂತ ದೊಡ್ಡ ಕಾರ್ಯಕ್ರಮವಾಗುವ ಭರವಸೆ ನೀಡಿದೆ. 3500 ಮಂದಿಯ ಸಾಮರ್ಥ್ಯದ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯುತ್ತಿದೆ. ಈಗಾಗಲೆ ಕಾರ್ಯಕ್ರಮಕ್ಕೆ 51 ರಾಷ್ಟ್ರಗಳಿಂದ 1000 ಸಿನಿಮಾಗಳ ಪ್ರವೇಶ ಬಂದಿದೆ.

ಈ ಸಂದರ್ಭದಲ್ಲಿ ಮಾತನಾಡಿದ ರೋಲಿಂಗ್ ಫ್ರೇಂ ಸಿನಿಮಾ ಸಮಿತ್‌ನ ಸಂಸ್ಥಾಪಕ ಅಧ್ಯಕ್ಷ ಹರ್ಷ ಶೆಟ್ಟಿ, ಇತ್ತೀಚೆಗೆ ನಾವು ಅತ್ಯದ್ಭುತವಾದ ಕಿರುಚಿತ್ರಗಳನ್ನು ನಿರ್ಮಿಸಿದ ಪ್ರತಿಭಾನ್ವಿತ ಸಿನಿಮಾ ನಿರ್ಮಾಪಕರನ್ನು ಕಾಣುತ್ತಿದ್ದೇವೆ. ಈ ಒಂದು ಭಿನ್ನ ಕಾರ್ಯಕ್ರಮದ ಮೂಲಕ ನಾವುನ ಅಂಥವರನ್ನು ಪ್ರೋತ್ಸಾಹಿಸುತ್ತೇವೆ. ಪಿಚಿಂಗ್ ಫೌರಂನಲ್ಲಿ ನಾವು ಕೆಲ ಸಮರ್ಥ ಸಿನಿಮಾ ನಿರ್ಮಾಪಕರನ್ನು ಮತ್ತು ಅವರ ಭವಿಷ್ಯದ ಯೋಜನೆಗಳನ್ನು ಪ್ರೋತ್ಸಾಹಿಸುವ ಉದ್ದೇಶ ಹೊಂದಿದ್ದೇವೆ. ಈ ವರ್ಷ ನಾವು ಇನ್ನು ದೊಡ್ಡ ಸಂವಾದ ಅನುಭವವನ್ನು ಪ್ರೇಕ್ಷಕರಿಗೆ ನೀಡುವ ನಿರೀಕ್ಷೆಯಲ್ಲಿದ್ದೇವೆ ಎಂದರು.

ಇಮಿತಾಜ್ ಅಲಿ, ಸ್ವಪ್ನ ಜಾರೆ, ಸಂದೀಪ್ ಮರ್ವಾ, ಚೇಸ್ ಬೊಮ್ಮನ್, ಮೀನಾಕ್ಷಿ ಶೆಡ್ಡೆ, ಸಂಜಯ್ ಚೌಹಾಣ್, ಅನುಪ್ ಭಂಡಾರಿ, ನರ್ಮತಾ ರಾವ್, ರಿಕಿ ಕೇಜ್, ಅನೀಜ್ ಬಸ್ಮಿ, ನೀರಜ್ ಪಾಠಕ್, ಯೋಗರಾಜ್ ಭಟ್, ಶಿಲಾದಿತ್ಯ ಬೋರ ಮೊದಲಾದ ಸಿನಿಮಾ ಕ್ಷೇತ್ರದ ಗಣ್ಯರನ್ನು ಈ ಸಮಿತ್ ಹೊಂದಿರಲಿದೆ.

‘ಇಂಥ ಒಂದು ಒಳ್ಳೆಯ ಸಮಿತ್ ಭಾಗವಾಗುತ್ತಿರುವುದು ನನಗೆ ಗೌರವದ ವಿಚಾರ. ಮುಂದಿನ ಹಂತ ತಲುಪುವ ಸಾಮರ್ಥ್ಯವಿರುವ ಹಲವು ಪ್ರತಿಭೆಗಳಿವೆ ಎಂದು ನಾನು ಪ್ರಬಲವಾಗಿ ನಂಬಿರುವೆ. ಈ

ಕಾರ್ಯಕ್ರಮ ಅಂಥವರಿಗೆ ಒಂದು ವೇದಿಕೆ. ಅವರು ವಿಶ್ವದ ಜನಪ್ರಿಯ ಕಲಾವಿದರೊಂದಿಗೆ ಸಂವಾದ ನಡೆಸುವ ಅವಕಾಶ ಪಡೆಯುತ್ತಾರೆ ಎಂದು ಹೆಸರಾಂತ ನಿರ್ದೇಶಕ ಟಿ.ಎಸ್.ನಾಗಾಭರಣ ಹೇಳಿದರು.

ಈ ವರ್ಷ ಸಮಿತ್‌ನಲ್ಲಿ ಕೆಲ ಬಾಫ್ಟಾ, ಜರ್ಮನಿ, ಫಿಲಂಫೇರ್ ಮತ್ತು ರಾಷ್ಟ್ರಪ್ರಶಸ್ತಿ ವಿಜೇತ ನಿರ್ದೇಶಕರು, ನಿರ್ಮಾಪಕರು, ಸಿನಿಛಾಯಾಗ್ರಾಹಕರು, ಸಂಕಲನಕಾರರು, ಬರಹಗಾರರು ಮೊದಲಾದವರು ಇರುತ್ತಾರೆ. ಜೊತೆಗೆ ಜರ್ಮನಿ/ಬಾಫ್ಟಾ ಪ್ರಶಸ್ತಿ ವಿಜೇತ ನಿರ್ಮಾಣ ಸಂಸ್ಥೆಯ, ಸ್ಟುಡಿಯೊದ ಬಿಸಿನೆಸ್ ಹೆಡ್‌ಗಳು ಇರುತ್ತಾರೆ.

**ರೋಲಿಂಗ್ ಫ್ರೇಂ ಫಿಲಂ ಸೊಸೈಟಿ ಕುರಿತು:**
ಇದು ಬೆಂಗಳೂರು ಮೂಲದ ಲಾಭರಹಿತ ಸಂಸ್ಥೆಯಾಗಿದ್ದು, ಸಿನಿಮಾ ಉತ್ಸಾಹಿಗಳು ಹಾಗೂ ಕ್ಷೇತ್ರದಲ್ಲಿ ಸಕ್ರಿಯರಿಗಾಗಿ ಸಂಸ್ಥಾಪಿತ ಸಂಸ್ಥೆ. ಸಿನಿಮಾ/ಆನಿಮೇಷನ್/ವಿಎಫ್‌ಎಕ್ಸ್ ಉದ್ಯಮಿ/ವಿದ್ಯಾರ್ಥಿಗಳು ಮೊದಲಾದವರಿಗೆ ನೆಟ್‌ವರ್ಕ್‌ಗೆ ಸಹಾಯ ಮಾಡುತ್ತದೆ. ಸಿನಿಮಾ ಸಂಬಂಧಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ.

For more information, contact:
Poonam Ahuja
marketing@rollingframes.com
+91 74110 02340 , +91 98806 82884